



# ಪವಿತ್ರ ಪತ್ರಮಾಲೆ

## ಸ್ವಾಮಿ ತುರೀಯಾನಂದಜಿ ಅವರ ಒಂದು ಪತ್ರ

*ಶಶಿ ನಿಕೇತನ*
*ಪುರಿ*
*೧೦ ಜುಲೈ ೧೯೧೭*

ಪ್ರೀತಿಯ...

ಜುಲೈ ೭ರ ನಿನ್ನ ಪತ್ರವನ್ನು ಸ್ವೀಕರಿಸಿ ಸಂತೋಷಗೊಂಡೆನು. ಭಗವಂತನಿಗೆ ನೀನು ಮಾಡುವ ಪ್ರಾರ್ಥನೆಗಳೆಲ್ಲವೂ ಸುಂದರವಾಗಿವೆ. ಈ ರೀತಿಯಲ್ಲಿ ಒಬ್ಬನು ತನ್ನ ಆಂತರಿಕ ಸಂವೇದನೆಗಳನ್ನು ಭಗವಂತನಲ್ಲಿ ತೋಡಿಕೊಳ್ಳಬೇಕು. ಭಗವಂತನು ಸರ್ವಶಕ್ತನು. ಅವನು ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾನೆ. ಅಂತಹ ಪ್ರಾರ್ಥನೆಯು ಹೃದಯಪೂರ್ವಕವಾಗಿದ್ದರೆ ಭಗವಂತನು ನಿಸ್ಸಂದೇಹವಾಗಿ ಅದನ್ನು ಖಂಡಿತ ಪೂರೈಸುತ್ತಾನೆ. ನಿನ್ನ ಮನಸ್ಸನ್ನು ಭಗವಂತನಲ್ಲಿ ನೆಲೆಸಿಡಲು ಪ್ರಯತ್ನಿಸು. ಅವನು ಖಂಡಿತವಾಗಲೂ ನಿನಗೆ ಸಹಾಯ ಮಾಡುವನು.



ಮನಸ್ಸು ಕಲುಷಿತವಾದಾಗ ಸಂದೇಹ ತಲೆದೋರುವುದು. ಯಾವ ಬಗೆಯ ಸ್ವಾರ್ಥಭಾವನೆಯೂ ನಿನ್ನ ಮನಸ್ಸಿನೊಳಗೆ ನುಸುಳದಂತೆ ಎಚ್ಚರಿಕೆಯಿಂದ ಇರು. ಭಗವಂತನಲ್ಲಿ ಸಂಪೂರ್ಣವಾಗಿ ಶರಣಾಗು. ಹೀಗೆ ಮಾಡಿದರೆ ನೀನು ಇನ್ನುಮೇಲೆ ಅವನನ್ನು ಹುಡುಕಬೇಕಾಗಿಲ್ಲ. (ಅವನೇ ನಿನ್ನನ್ನು ಉದ್ಧರಿಸುವನು.) ಬಂಗಾಳಿ ಗೀತೆಯೊಂದು ಹೀಗೆ ಹೇಳುತ್ತದೆ:

**"ನಾನು ನನ್ನ ದೇಹವನ್ನು ಪ್ರಪಂಚದ ಮಾರುಕಟ್ಟೆಯಲ್ಲಿ ಮಾರಿಬಿಟ್ಟು, ಅದಕ್ಕೆ ಬದಲಾಗಿ ತಾಯಿ ದುರ್ಗೆಯ ಹೆಸರನ್ನು ಕೊಂಡುಕೊಂಡಿದ್ದೇನೆ."**

ಈ ಭಾವನೆಯನ್ನು ನೀನು ನಿನ್ನ ಜೀವನದಲ್ಲಿ ಹೃದಯಪೂರ್ವಕವಾಗಿ ಅಳವಡಿಸಿಕೊಂಡರೆ, ನೀನೆಂದೂ ಭಯ ಅಥವಾ ಕಳವಳವನ್ನು ಎದುರಿಸುವುದಿಲ್ಲ. ಆದರೆ ಈ ಕಾರ್ಯ ಬಹಳ ನಿಧಾನವಾಗಿ ಆಗುತ್ತದೆ. ಒಂದು ಹಾಡು ಹೀಗೆ ಹೇಳುತ್ತದೆ:

**ಓ ಮನಸ್ಸೇ, ಜಗನ್ಮಾತೆಯ ಪಾದಗಳಲ್ಲಿ ಮುಳುಗಿಹೋಗು.**
**ಸಂಪೂರ್ಣವಾಗಿ ತಲ್ಲೀನವಾದಾಗ ಮಾತ್ರವೇ**
**ನೀನು ಸಂಕಷ್ಟಗಳಿಂದ ಪಾರಾಗುವೆ.**
**ಈ ಜಗತ್ತು ಸತ್ಯವಲ್ಲ; ಆದ್ದರಿಂದ ಏಕೆ ತಾನೇ**
**ಗುರಿಯಿಲ್ಲದೆ ಇಲ್ಲಿ ಸುತ್ತಾಡುವೆ?**
**ನಿನ್ನ ಹೃದಯದಲ್ಲಿಯೇ ಇರುವ ಬ್ರಹ್ಮನ ಶಕ್ತಿಯಾದ**
**ಕುಂಡಲಿನಿಯ ಮೇಲೆ ಧ್ಯಾನ ಮಾಡು.**
**ಕಮಲಾಕಾಂತ ಹೇಳುತ್ತಾನೆ,**
**'ತಾಯಿ ಶ್ಯಾಮೆಯ ವೈಭವವನ್ನು ಹಾಡು' ಎಂದು.**
**ಹೀಗೆ ಮಾಡಿದರೆ, ಜೀವನವು ಆನಂದದ**
**ನದೀಪ್ರವಾಹವಾಗುವುದು.**
**ಹೀಗಾದಾಗ ನಿನ್ನ ದೋಣಿಯನ್ನು**
**ನೀನು ಅದರಲ್ಲಿ ನಿಧಾನವಾಗಿ**
**ಹುಟ್ಟುಹಾಕಬಹುದು.**

ಮೊದಲು ಜೀವನವೆಂಬುದು ಆನಂದದ ನದೀಪ್ರವಾಹ ಎನ್ನುವುದನ್ನು ತಿಳಿದುಕೋ. ಅದರಲ್ಲಿ ನಿನ್ನ ದೋಣಿಯನ್ನು ನಿಧಾನವಾಗಿ ಹುಟ್ಟುಹಾಕು. ಅವಸರಪಡಬೇಡ. ನಾವು ಜಗನ್ಮಾತೆಯನ್ನು ಕರೆಯುತ್ತಾ ಹೋಗಬೇಕು. ಇದಕ್ಕಿಂತ ಬೇರೆ ಏನು ತಾನೇ ನಮಗೆ ಬೇಕು? ಜಗನ್ಮಾತೆಯನ್ನು ಕರೆಯುವ ಅವಕಾಶದಿಂದಲೇ ಧನ್ಯರಾದೆವೆಂದು ನಾವು ಭಾವಿಸಬೇಕು. ಇದನ್ನು ಬಿಟ್ಟು ಬೇರೆ ಏನಾದರೂ ಆಸೆ ಇದ್ದರೆ, ಅದು ಪ್ರಾಪಂಚಿಕ ಆಸೆ. ಇಂಥ ಪ್ರಾಪಂಚಿಕ ಬಯಕೆಯು ಮನಸ್ತಾಪ, ಸಂದೇಹ ಮತ್ತು ಮಾನಸಿಕ ಚಂಚಲತೆಗಳನ್ನು ನಮ್ಮಲ್ಲಿ ಹುಟ್ಟುಹಾಕುತ್ತದೆ.

ಆದ್ದರಿಂದ ಎಚ್ಚರದಿಂದಿರು. ನಿನ್ನ ಹೃದಯದಲ್ಲಿ ಜಗನ್ಮಾತೆಯನ್ನು ನೋಡುವ ಬಯಕೆಯೊಂದನ್ನು ಬಿಟ್ಟು, ಬೇರಾವ ಆಸೆಯೂ ಇಲ್ಲದಿರಲಿ. ಪ್ರಾಪಂಚಿಕ ಆಸೆಗಳು ಆಪತ್ತನ್ನು ತರುತ್ತವೆ. ನಿಧಾನವಾಗಿ ಜಗನ್ಮಾತೆಯು ನಿನಗೆ ಇವೆಲ್ಲವನ್ನೂ ಅರ್ಥಮಾಡಿಸುತ್ತಾಳೆ. ನಿನ್ನ ಸದಾಶಯಗಳನ್ನು ಪೂರ್ತಿಮಾಡಲೆಂದು ಆಕೆಯನ್ನು ಕುರಿತು ಪ್ರಾರ್ಥನೆ ಮಾಡು. ಮನಸ್ಸು ಮತ್ತು ಮಾತುಗಳಲ್ಲಿ ಸಾಮರಸ್ಯ ಬಂದಾಗ, ನೀನು ಎಲ್ಲವನ್ನೂ ಸಾಧಿಸುವೆ.

ನಿನ್ನ ಹಿತಾಕಾಂಕ್ಷಿ
**ತುರೀಯಾನಂದ**

ಸ್ವಾಮಿ ನಿತ್ಯಸ್ಥಾನಂದ

# ಭಗವದ್ಗೀತಾ ತತ್ತ್ವ ಸೌರಭ



# ಅವತಾರತತ್ತ್ವ

**ಅ**ವತಾರತತ್ತ್ವದ ವಿಷಯವು ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ಬರುತ್ತದೆ. ಆ ಅಧ್ಯಾಯದ ಆರನೆಯ ಶ್ಲೋಕದಲ್ಲಿ ಅವತಾರದ ಹಿಂದಿರುವ ಮುಖ್ಯ ತತ್ತ್ವವನ್ನು ಸಂಕ್ಷೇಪವಾಗಿ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ:

**ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್**
**ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ (೪:೬)**

"ನಾನು ಜನ್ಮರಹಿತನೂ ಕ್ಷೀಣವಾಗದ ಸ್ವರೂಪವುಳ್ಳವನೂ ಪ್ರಾಣಿಗಳ ನಿಯಾಮಕನೂ ಆಗಿದ್ದರೂ ನನ್ನ ಪ್ರಕೃತಿಯನ್ನು ಆಶ್ರಯಿಸಿ ನನ್ನ ಮಾಯೆಯ ಮೂಲಕ ಅವತಾರ ಮಾಡುತ್ತೇನೆ."

ಇಲ್ಲಿ ಪರಸ್ಪರ ವಿರುದ್ಧ ಭಾವನೆಗಳನ್ನು ಕಾಣುತ್ತೇವೆ. ಭಗವಂತನು ಜನ್ಮರಹಿತನಾದುದರಿಂದ ಅವತಾರವಾಗಿ ಜನ್ಮವೆತ್ತುವುದು ಹೇಗೆ? ಅವನ ಸ್ವರೂಪ ಯಾವತ್ತೂ ಕ್ಷೀಣವಾಗದುದು. ಅಂದರೆ ಅವನ ಸ್ವರೂಪ ಅನಂತ, ಆದರೆ ಅವತಾರದಲ್ಲಿ ಅವನು ಸಾಂತನಾಗುತ್ತಾನೆ. ಅವನ ಸ್ವರೂಪ ಶುದ್ಧ ಚೈತನ್ಯ, ಆದರೆ ಅವತಾರದಲ್ಲಿ ಅವನಿಗೆ ಮಾನವಸ್ವಭಾವ ಬಂದುಬಿಡುತ್ತದೆ. ಅವನು ಆನಂದಸ್ವರೂಪ, ಆದರೆ ಅವತಾರದಲ್ಲಿ ಸುಖದು:ಖಗಳನ್ನು ಅನುಭವಿಸುತ್ತಾನೆ. ಅವನು ಪರಿಪೂರ್ಣ, ಆದರೆ ಅವತಾರದಲ್ಲಿ ಪರಿಪೂರ್ಣತೆಯನ್ನು ಪಡೆಯಲು ಅಪಾರ ಸಾಧನೆ ಮಾಡುತ್ತಾನೆ. ಅವನು ನಿಷ್ಕ್ರಿಯ, ಆದರೆ ಅವತಾರವಾಗಿ ಅವನು ಕ್ರಿಯಾಶೀಲನಾಗುತ್ತಾನೆ. ಹೀಗೆ ಈ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. ಅವನು ಜಗತ್ತಿಗೇ ಒಡೆಯನಾದರೂ ಇಲ್ಲಿ ಸಾಮಾನ್ಯ ಮಾನವನಂತೆ ವರ್ತಿಸುತ್ತಾನೆ. ಈ ವೈರುಧ್ಯಗಳ ನಿವಾರಣೆ ಹೇಗೆ ಸಾಧ್ಯ? ಪರಿಪೂರ್ಣ, ಅಸೀಮ ಅಸ್ತಿತ್ವವು ಒಂದು ಸೀಮಿತ ವ್ಯಕ್ತಿಯಾಗಿ ಅವತರಿಸುವುದಾದರೂ ಹೇಗೆ? ಶ್ರೀಶಂಕರಾಚಾರ್ಯರು ಸುಲಭವಾಗಿ ಈ ಸಮಸ್ಯೆಯನ್ನು ಪರಿಹರಿಸುತ್ತಾರೆ. **ದೇಹವಾನಿವ ಭವಾಮಿ ಜಾತ ಇವ** – "ನಾನು ದೇಹಧಾರಣೆ ಮಾಡಿದಂತೆ, ಹುಟ್ಟಿದಂತೆ ಕಾಣುತ್ತೇನೆ" ಎಂದು ಶ್ರೀಕೃಷ್ಣನ ಹೇಳಿಕೆಗೆ **'ಇವ'** ಸೇರಿಸುವುದರ ಮೂಲಕ ಅವತಾರವು ಒಂದು ತೋರಿಕೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಅವರ ದೃಷ್ಟಿಯಲ್ಲಿ ಇಡೀ ಜಗತ್ತೇ ತೋರಿಕೆಯಾದುದರಿಂದ ಅವತಾರವೂ ತೋರಿಕೆಯೇ ಆಗಿರಬೇಕು. ನಾವು ಈ ವ್ಯಾವಹಾರಿಕ ಪ್ರಪಂಚದಲ್ಲಿ ಇರುವವರೆಗೆ ಎಲ್ಲವನ್ನೂ ಸತ್ಯವಾಗಿ ಸ್ವೀಕರಿಸಬೇಕಾಗಿರುವುದರಿಂದ ಅವತಾರವೂ ನಮ್ಮ ಪಾಲಿಗೆ ಸತ್ಯವೇ ಆಗುತ್ತದೆ. ಇಡೀ ಜಗತ್ತೇ ಭಗವಂತನ ಆವಿರ್ಭಾವವಾಗಿರುವುದರಿಂದ ಅವತಾರವನ್ನೂ ಅವನ ವಿಶೇಷ ಆವಿರ್ಭಾವವೆಂದು ಸ್ವೀಕರಿಸುವುದು ಸಾಧ್ಯವಾಗುತ್ತದೆ.

ತನ್ನ ಪ್ರಕೃತಿಯನ್ನು ಆಶ್ರಯಿಸಿ ಅವತರಿಸುತ್ತೇನೆ ಎಂದು ಶ್ರೀಕೃಷ್ಣನು ಹೇಳುತ್ತಾನೆ. ಇಲ್ಲಿ 'ಪ್ರಕೃತಿ' ಎಂದರೆ ಏನು? ಶ್ರೀಕೃಷ್ಣನು ಎರಡು ಬಗೆಯ ಪ್ರಕೃತಿಗಳನ್ನು ಹೇಳುತ್ತಾನೆ: **ಅಪರಾ** ಮತ್ತು **ಪರಾ**.

**ಭೂಮಿರಾಪೋಽನಲೋ ವಾಯುಃ**
**ಖಂ ಮನೋ ಬುದ್ಧಿರೇವ ಚ ।**
**ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥**

**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।**
**ಜೀವಭೂತಾಂ ಮಹಾಬಾಹೋ**
**ಯಯೇದಂ ಧಾರ್ಯತೇ ಜಗತ್ ॥**
**(೭ : ೪–೫)**

"ಭೂಮಿ, ನೀರು, ಅಗ್ನಿ, ವಾಯು, ಆಕಾಶ (ಪಂಚಭೂತಗಳು), ಮನಸ್ಸು, ಬುದ್ಧಿ, ಮತ್ತು ಅಹಂಕಾರ – ಇವು ನನ್ನ ಎಂಟು ಬಗೆಯ ವಿಭಿನ್ನ ಪ್ರಕೃತಿ. ಇದು ಅಪರಾ ಪ್ರಕೃತಿ. ಇದಕ್ಕಿಂತಲೂ ಬೇರೆಯಾದ, ಜೀವರೂಪದಲ್ಲಿರುವ ನನ್ನ ಪರಾ ಪ್ರಕೃತಿಯನ್ನು ತಿಳಿದುಕೊ. ಅದರಿಂದಲೇ ಈ ಜಗತ್ತು ಧರಿಸಲ್ಪಟ್ಟಿರುವುದು."

ಇಲ್ಲಿ ಅಪರಾ ಪ್ರಕೃತಿಯು ಅಚೇತನವನ್ನೂ, ಪರಾ ಪ್ರಕೃತಿಯು ಚೇತನವನ್ನೂ ಸೂಚಿಸುತ್ತದೆ. ಒಂದೇ ಪ್ರಕೃತಿಶಕ್ತಿಯು ವಿಷಯ (**ಅಪರಾ**) ಮತ್ತು ವಿಷಯಿಯಾಗಿ (**ಪರಾ**) ಅಭಿವ್ಯಕ್ತವಾಗುತ್ತದೆ. ತಂತ್ರಶಾಸ್ತ್ರದ ಪ್ರಕಾರ **ಪರಬ್ರಹ್ಮ** ಮತ್ತು **ಶಕ್ತಿ** ಅಭೇದ – ಶ್ರೀರಾಮಕೃಷ್ಣರು ಹೇಳುವಂತೆ, ಬೆಂಕಿ ಮತ್ತು ಅದರ ದಹನ ಶಕ್ತಿ ಒಂದೇ ಆಗಿರುವಂತೆ. ತಂತ್ರಶಾಸ್ತ್ರದಲ್ಲಿ ಪರಬ್ರಹ್ಮನನ್ನು

**'ಶಿವ'** ಎಂದು ಕರೆಯಲಾಗಿದೆ. ಪ್ರಲಯಾವಸ್ಥೆಯಲ್ಲಿ ಈ ಶಕ್ತಿಯು ಶಿವನಲ್ಲಿ ಸುಪ್ತವಾಗಿರುತ್ತದೆ. ಇದಕ್ಕೆ **ಶಿವ–ಶಕ್ತಿ ತತ್ತ್ವ** ಎಂದು ಹೆಸರು. ಸೃಷ್ಟಿಯ ಪ್ರಾರಂಭದಲ್ಲಿ ಈ ಶಕ್ತಿಯು ಸೃಷ್ಟಿಸಂಕಲ್ಪವಾಗಿ ವ್ಯಕ್ತವಾಗುತ್ತದೆ. ಈ ಸಂಕಲ್ಪವು ಅತ್ಯಂತ ಸೂಕ್ಷ್ಮ ಸ್ಪಂದನೆ. ಇದನ್ನು **ಮೂಲಶಬ್ದ** ಅಥವಾ **ನಾದ** ಎಂದು ಕರೆಯುತ್ತಾರೆ. ಈ ಸ್ಪಂದನಾಯುಕ್ತ ಶಿವ ಅಥವಾ ಪರಬ್ರಹ್ಮವನ್ನು **ಶಬ್ದಬ್ರಹ್ಮ** ಅಥವಾ **ಸದಾಶಿವ ತತ್ತ್ವ** ಎಂದು ಕರೆಯುತ್ತಾರೆ. ಈ ಸ್ಪಂದನದ ಪ್ರಾತಿನಿಧಿಕ ಧ್ವನಿಯೇ **ಓಂಕಾರ** ಅಥವಾ ಪ್ರಣವ. ಈ ಸ್ಥಿತಿಯಲ್ಲಿ **ವಿಷಯಿ** (ಅಹಂ) ಪ್ರಧಾನವಾಗಿರುತ್ತದೆ, **ವಿಷಯ** (ಇದಂ) ಅಭಿವ್ಯಕ್ತವಾಗಿರುವುದಿಲ್ಲ. ಇದರ ಮುಂದಿನ ಹಂತ ಈಶ್ವರ ತತ್ತ್ವ. ಇಲ್ಲಿ **ವಿಷಯ ಜಗತ್ತು** (ಇದಂ) ಸ್ಪಷ್ಟವಾಗಿ ಅನುಭವಿಸಲ್ಪಡುತ್ತದೆ, ಆದರೆ ಆತ್ಮನಿಂದ ಪ್ರತ್ಯೇಕವಾಗಿಯಲ್ಲ. ಹಿಂದಿನ ಹಂತದಲ್ಲಿ **'ಅಹಂ'** ಪ್ರಧಾನವಾದರೆ, ಇಲ್ಲಿ **'ಇದಂ'** ಪ್ರಧಾನವಾಗಿರುತ್ತದೆ. ಈ ತತ್ತ್ವವನ್ನು **ಬಿಂದು** ಎಂದು ಕರೆಯತ್ತಾರೆ. ಇದರ ಮುಂದಿನ ಹಂತ **ಸದ್ವಿದ್ಯಾ** ಅಥವಾ **ಶುದ್ಧವಿದ್ಯಾ ತತ್ತ್ವ**. ಈ ಸ್ಥಿತಿಯಲ್ಲಿ **'ಅಹಂ'** (ವಿಷಯಿ) ಮತ್ತು **'ಇದಂ'** (ವಿಷಯ) – ಇವೆರಡೂ ಸಮಾನ ಪ್ರಾಧಾನ್ಯತೆಯನ್ನು ಪಡೆದಿರುತ್ತವೆ, ಎರಡೂ ಪ್ರತ್ಯೇಕವಾಗುವುದಕ್ಕೆ ಸಿದ್ಧವಾಗಿರುತ್ತವೆ. ಈ ಸ್ಥಿತಿಯಲ್ಲಿ ಶಕ್ತಿಯು ಮಧ್ಯ ಪ್ರವೇಶಿಸಿ 'ವಿಷಯಿ' ಮತ್ತು 'ವಿಷಯ'ವನ್ನು ಪ್ರತ್ಯೇಕಿಸುತ್ತದೆ. ಮುಂದೆ ವಿಷಯಿಯು ಜೀವಜಗತ್ತಾಗಿಯೂ ವಿಷಯವು ಸ್ಥೂಲ ಜಗತ್ತಾಗಿಯೂ ಅಭಿವ್ಯಕ್ತವಾಗುತ್ತವೆ. ಅನಂತ ಭೇದಗಳಿಂದ ಕೂಡಿದ ಈ ಸ್ಥಿತಿಯನ್ನು ಕಲಾ ಎಂದು ಕರೆಯುತ್ತಾರೆ. ನಾದವು ಮೂಲ ಸ್ಪಂದನ ಅಥವಾ ಶಬ್ದ (Casual state), ಬಿಂದುವೆಂದರೆ ಭೇದರಹಿತ ಬೀಜಸ್ಥಿತಿ (Undifferntiated state), ಹಾಗೂ ಕಲಾ ಎಂದರೆ ಅನಂತ ಭೇದರೂಪದ ವ್ಯಕ್ತ ಸ್ಥಿತಿ. (ನೋಡಿ, *The Garland of Letters*, by Sir John Woodroff).

ಇಡೀ ಜಗತ್ತು ಶಬ್ದಬ್ರಹ್ಮನ ವಿವಿಧ ಅಭಿವ್ಯಕ್ತಿ ಎಂದಾಯಿತು. ಇದೇ ಶಬ್ದಬ್ರಹ್ಮನ ವಿಶೇಷ ಅಭಿವ್ಯಕ್ತಿಯನ್ನು **'ಅವತಾರ'** ಎಂದು ಕರೆಯಬಹುದು. ಶಬ್ದಶಕ್ತಿಯ ಮೂಲಕ ಜಗತ್ತು ಅಭಿವ್ಯಕ್ತವಾಗುತ್ತದೆ, ಹಾಗೆಯೇ ಅವತಾರವೂ ಕೂಡ. ಈ ಶಬ್ದಶಕ್ತಿಯು ಪರಾ ಮತ್ತು ಅಪರಾ ಪ್ರಕೃತಿಗಳೆರಡನ್ನೂ ಒಳಗೊಳ್ಳುತ್ತದೆ. ಆದ್ದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ, "ನನ್ನ ಪ್ರಕೃತಿಯನ್ನು ಆಶ್ರಯಿಸಿ ಅವತರಿಸುತ್ತೇನೆ" ಎಂದು. ಕ್ರೈಸ್ತಧರ್ಮದಲ್ಲಿಯೂ ಇದೇ ರೀತಿಯ ಭಾವನೆಯನ್ನು ಕಾಣಬಹುದು. ಸಂತ ಜಾನನ ಸುವಾರ್ತೆಯ ಪ್ರಾರಂಭದಲ್ಲಿಯೇ ಈ ಮಾತು ಬರುತ್ತದೆ: "ಪ್ರಾರಂಭದಲ್ಲಿ ಶಬ್ದವಿತ್ತು. ಶಬ್ದವು ಭಗವಂತನೊಡನಿತ್ತು, ಮತ್ತು ಶಬ್ದವೇ ಭಗವಂತ.... ಈ ಶಬ್ದವು ಮೂರ್ತರೂಪವನ್ನು ಪಡೆದು, ಅನುಗ್ರಹ ಮತ್ತು ಸತ್ಯಗಳಿಂದ ಒಡಗೂಡಿ, ನಮ್ಮೊಡನೆ ವಾಸಿಸಿತು" (The Gospel according to St. John , ೧, ೨, ೩, ೧೪, ೧೫).

ಮೇಲಿನ ಬೈಬಲ್ ಹೇಳಿಕೆಯು ಈ ಮುಂದಿನ ವೇದೋಕ್ತಿಯ ಅನುವಾದದಂತಿದೆ:

**ಪ್ರಜಾಪತಿರ್ವೈ ಇದಂ ಆಸೀತ್, ತಸ್ಯ ವಾಕ್ ದ್ವಿತೀಯಾ ಆಸೀತ್, ವಾಗ್ವೈ ಪರಮಂ ಬ್ರಹ್ಮ** – "ಪ್ರಾರಂಭದಲ್ಲಿ ಬ್ರಹ್ಮವು ಇದ್ದಿತು, ಅದರೊಡನೆ ವಾಕ್ ಅಥವಾ ಶಬ್ದ ಇದ್ದಿತು, ಮತ್ತು ಈ ಶಬ್ದವೇ ಬ್ರಹ್ಮ." ಇಲ್ಲಿ ವಾಕ್ ಅಥವಾ ಶಬ್ದವು ಪರಬ್ರಹ್ಮನ ಶಕ್ತಿ. ಕ್ರೈಸ್ತಧರ್ಮದ ಪ್ರಕಾರ ಈ ಶಕ್ತಿಯು ಒಮ್ಮೆ ಮಾತ್ರ ಯೇಸು ಕ್ರಿಸ್ತನ ರೂಪದಲ್ಲಿ ಅವತರಿಸಿತು. ಆದರೆ ಹಿಂದೂಧರ್ಮದ ಪ್ರಕಾರ ಯುಗಯುಗದಲ್ಲಿಯೂ ಭಗವಂತನು ಮತ್ತೆ ಮತ್ತೆ ಅವತರಿಸುತ್ತಾನೆ.

ಅವತಾರವನ್ನು ಕುರಿತು ಸ್ವಾಮಿ ವಿವೇಕಾನಂದರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಹೀಗೆ ಹೇಳುತ್ತಾರೆ: "ಬರಿಯ ಆಲೋಚನೆಗಳು ಕಿರಿಯ ಅಲೆಗಳಂತೆ. ಅವುಗಳು ಚಲಿಸುವಂತೆ ಮಾಡಲು ಹೊಸ ಪ್ರೇರಣೆಗಳು ಏಕಕಾಲದಲ್ಲಿ ಬರುತ್ತವೆ. ಕೊನೆಗೆ ದೊಡ್ಡದೊಂದು ಅಲೆಯೆದ್ದು ಕಿರಿಯ ಅಲೆಗಳನ್ನೆಲ್ಲ ಆಪೋಶನ ತೆಗೆದುಕೊಳ್ಳುತ್ತದೆ. ಈ ವಿಶ್ವದ ಭಾವತರಂಗಗಳು ಐನೂರು ವರ್ಷಕ್ಕೆ ಒಮ್ಮೆ ಏಳುವಂತೆ ತೋರುತ್ತದೆ. ಆಗ ಆ ದೊಡ್ಡ ಅಲೆಯು ಉಳಿದ ಕಿರಿ ಅಲೆಗಳನ್ನೆಲ್ಲ ತನ್ನಲ್ಲಿ ಅಡಗಿಸಿಕೊಳ್ಳುತ್ತದೆ. ಆ ದೊಡ್ಡ ಅಲೆಯನ್ನೇ 'ದೇವದೂತ' ಎನ್ನುವುದು. ಅವನು ತನ್ನ ಮನಸ್ಸಿನಲ್ಲಿ ಆ ಯುಗದ ಆಲೋಚನೆಯನ್ನು ಕೇಂದ್ರೀಕರಿಸಿ ಅದನ್ನು ಸ್ಥೂಲರೂಪದಲ್ಲಿ ಮಾನವಕೋಟಿಗೆ ಕೊಡುತ್ತಾನೆ. ಕೃಷ್ಣ, ಬುದ್ಧ, ಕ್ರಿಸ್ತ, ಮಹಮ್ಮದ್, ಲೂಥರ್ ಮುಂತಾದವರನ್ನು ತಮ್ಮ ಸಮಕಾಲೀನ ಅಲೆಗಳ ನಡುವೆ ಮೇಲೆದ್ದ ಮಹದಲೆಗಳಂತೆ ಪರಿಗಣಿಸಬಹುದು (ಅವರ ಮಧ್ಯೆ ಸುಮಾರು ಐನೂರು ವರ್ಷಗಳ ಅಂತರವಿರುವುದು ಕಂಡುಬರುತ್ತದೆ). ಯಾವ ಅಲೆಯ ಹಿಂದೆ ಅತ್ಯಂತ ಹೆಚ್ಚು ಪವಿತ್ರತೆ ಇದೆಯೋ, ಶುದ್ಧ ಚಾರಿತ್ರ್ಯವಿದೆಯೋ ಅದೇ ಒಂದು ಮಹಾ ಸುಧಾರಣೆಯಂತೆ ಸಮಾಜದ ಮೇಲೆ ಬೀಳುತ್ತದೆ" (*ಕೃತಿಶ್ರೇಣಿ*, ೭ : ೨೩೮).

ಸ್ವಾಮಿ ಶಾರದಾನಂದರ ಪ್ರಕಾರ ವೈದಿಕ ಕಾಲಕ್ಕೆ ಸೇರಿದ ವಿಶೇಷ ಶಕ್ತಿಗಳಿಂದ ಕೂಡಿದ ಕೆಲವು ಋಷಿಗಳನ್ನು ಮುಂದೆ ಅವತಾರಗಳೆಂದು ಪರಿಗಣಿಸಲಾಯಿತು. ವೈದಿಕ ಕಾಲದಲ್ಲಿ ದ್ರಷ್ಟಾರರೆಲ್ಲರನ್ನೂ ಋಷಿಗಳ ಗುಂಪಿಗೆ ಸೇರಿಸಿದರು. ಆದರೆ ಈ ಋಷಿಗಳೆಲ್ಲರೂ ಸಮಾನರಲ್ಲ. "ಅವರಲ್ಲಿ ಕೆಲವರು ಆಧ್ಯಾತ್ಮಿಕ ಜಗತ್ತಿನ ಸೂರ್ಯನಂತಿದ್ದರೆ, ಇನ್ನು ಕೆಲವರು ಚಂದ್ರನಂತೆ, ಮತ್ತೆ ಕೆಲವರು ನಕ್ಷತ್ರ ಸಮಾನರು. ಇನ್ನು ಕೆಲವರು ಸಾಮಾನ್ಯ ದೀಪವಿದ್ದಂತೆ" ಎಂದು ಮುಂದಿನ ಜನಾಂಗಕ್ಕೆ ಅರ್ಥವಾಯಿತು. ಹೀಗೆ ಪೌರಾಣಿಕ ಯುಗದಲ್ಲಿ ಅವತಾರ ತತ್ತ್ವದಲ್ಲಿ ನಂಬಿಕೆ ಉತ್ಪನ್ನವಾಯಿತು. ವೈದಿಕ ಯುಗದ ವಿಶಿಷ್ಟ ಗುಣ ಮತ್ತು ಶಕ್ತಿಶಾಲಿಗಳಾದ ಋಷಿಗಳೇ ಈಶ್ವರಾವತಾರಗಳಾಗಿ ಪರಿಗಣಿಸಲ್ಪಟ್ಟರು. ಅಪೂರ್ವ ಪವಿತ್ರತೆ ಮತ್ತು ಸಂಯಮಗಳಿಂದ ಕೂಡಿದ ಈ ಅವತಾರ ಪುರುಷರು ತಮ್ಮ ವೈಯಕ್ತಿಕ ಮುಕ್ತಿಯನ್ನು ಕಡೆಗಣಿಸಿ, ತಮ್ಮ ಸ್ವಸ್ವರೂಪದಲ್ಲಿ ಲೀನವಾಗದೆ ಜಗತ್ತಿನ ಹಿತಕ್ಕೋಸ್ಕರವಾಗಿ ತಮ್ಮ ವೈಯಕ್ತಿಕತೆಯನ್ನು ಉಳಿಸಿಕೊಳ್ಳುತ್ತಾರೆ. "ಈ ರೀತಿಯ

ಮಹಾಪುರುಷರ ಅತೀಂದ್ರಿಯ ದರ್ಶನ ಮತ್ತು ಅನುಭವ – ಇವುಗಳ ಭದ್ರ ತಳಹದಿಯ ಮೇಲೆಯೇ ಭಾರತದ ಧರ್ಮ ಸೌಧ ನಿರ್ಮಾಣಗೊಂಡು ಬರಬರುತ್ತ ದೊಡ್ಡದಾಗಿ ಬೆಳೆದು ಹಿಮವತ್ ಪರ್ವತದಂತೆ ವಿಶಾಲ ಗಗನಚುಂಬಿಯಾಗಿ ಶೋಭಿಸುತ್ತಿರುವುದು."

ಸ್ವಾಮಿ ಶಾರದಾನಂದರು ಈ ಅವತಾರತತ್ತ್ವದ ಇನ್ನೊಂದು ವಿವರಣೆಯನ್ನು ನೀಡುತ್ತಾರೆ. ಅತಿ ಹಿಂದಿನ ಕಾಲದಿಂದಲೂ ಗುರೂಪಾಸನೆ ಭಾರತದಲ್ಲಿ ಪ್ರಚಲಿತವಿದೆ. ಜನರನ್ನು ಭವಬಂಧನದಿಂದ ಪಾರುಗಾಣಿಸಿ ಉದ್ಧಾರ ಮಾಡುವ ಸಾಮರ್ಥ್ಯವುಳ್ಳವನೇ ಗುರು; ಭಗವದ್‌ಶಕ್ತಿಯೇ ಗುರುರೂಪದಲ್ಲಿ ಕೆಲಸಮಾಡುತ್ತಿದೆ ಎಂಬ ನಂಬಿಕೆ ಕ್ರಮೇಣ ದೃಢವಾಯಿತು. ಇಲ್ಲದಿದ್ದರೆ ಸಾಮಾನ್ಯ ಮಾನವನಿಗೆ, ಅವನು ಎಷ್ಟೇ ಶ್ರೇಷ್ಠನಾಗಿದ್ದರೂ, ಈ ರೀತಿ ಆಧ್ಯಾತ್ಮಿಕವಾಗಿ ವ್ಯಕ್ತಿಯನ್ನು ಉದ್ಧಾರ ಮಾಡುವ ಸಾಮರ್ಥ್ಯವಿರುವುದಿಲ್ಲ. ಅತ್ಯಂತ ಶ್ರೇಷ್ಠ ಮಟ್ಟದ ಗುರುಗಳ ಉಪಾಸನೆಯೇ ಮುಂದೆ ಅವತಾರದ ಕಲ್ಪನೆಗೆ ಎಡೆಮಾಡಿಕೊಟ್ಟಿತು. "ಭವರೋಗದಿಂದ ಪಾರಾಗಲು ಜನರು ಬಹುಕಾಲದಿಂದ ಭಗವಂತನ ಸಹಾಯವನ್ನು ಯಾಚಿಸುತ್ತಿದ್ದರು. ಅದೇ ಈಗ ಗುರುವಿನ ರೂಪದಲ್ಲಿ ಬರುತ್ತಿದೆ ಎಂದು ಅವರು ನಂಬಿದರು. ಭಗವಂತನ ಕರುಣೆಯೇ ಮೂರ್ತಿರೂಪವನ್ನು ಪಡೆದು ಗುರುಶಕ್ತಿಯ ರೂಪದಲ್ಲಿ ತಮ್ಮ ಮುಂದಿರುವುದೆಂದು ಅವರು ಭಾವಿಸಿದರು (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಪುಟ ೨: ೭).

ಅವತಾರದ ಮುಖ್ಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು:

೧. ಅವರು ನಿತ್ಯಮುಕ್ತರು. ಅವರು ಮಾಡುವ ಸಾಧನೆಯು ವೈಯಕ್ತಿಕ ಮುಕ್ತಿಗಲ್ಲ. ಜನರಿಗೆ ನಿಜವಾದ ಧರ್ಮಮಾರ್ಗವನ್ನು ತೋರಿಸುವುದಕ್ಕೆ. ಅವರ ಯಾವುದೇ ಕಾರ್ಯದ ಹಿಂದೆಯೂ ಸ್ವಾರ್ಥವಿರುವುದಿಲ್ಲ, ಕೇವಲ ಲೋಕಹಿತವೊಂದೇ ಉದ್ದೇಶ ವಾಗಿರುತ್ತದೆ.

೨. ಹುಟ್ಟುವಾಗಲೇ ಅವರು ಪೂರ್ಣಸ್ಮೃತಿಯಿಂದ ಹುಟ್ಟಿರು ತ್ತಾರೆ. ಭೂತ–ಭವಿಷ್ಯದ ಅರಿವು ಅವರಿಗಿರುತ್ತದೆ. ತಮ್ಮ ದಿವ್ಯತೆಯ ಅರಿವು ಅವರಿಗೆ ಸ್ಪಷ್ಟವಾಗಿರುತ್ತದೆ. ಬಾಲ್ಯಾವಸ್ಥೆಯಲ್ಲಿ ಅಷ್ಟು ಸ್ಪಷ್ಟವಾಗಿ ಅಭಿವ್ಯಕ್ತವಾಗಿರದಿದ್ದರೂ, ಕ್ರಮೇಣ ದೇಹ ಮನಸ್ಸುಗಳು ಬೆಳೆದಂತೆ ಅದು ಸ್ಪಷ್ಟವಾಗಿ ಅವರ ಅರಿವಿಗೆ ಬರುತ್ತದೆ.

೩. ಧರ್ಮಕ್ಷೇತ್ರದಲ್ಲಿ ಆ ಕಾಲಕ್ಕೆ ಅನುಗುಣವಾದ ಹೊಸ ಮಾರ್ಗವನ್ನು ಇವರು ಜನರಿಗೆ ತೋರಿಸಿಕೊಡುತ್ತಾರೆ. ಒಂದು ಹೊಸ ಮತವನ್ನು ಸ್ಥಾಪಿಸುತ್ತಾರೆ ಎಂದು ಇದರ ಅರ್ಥ. ತಾವು ಹುಟ್ಟಿದ ಧರ್ಮಕ್ಕೆ ಒಂದು ಹೊಸ ದಿಕ್ಕನ್ನು ತೋರಿಸುತ್ತಾರೆ ಎಂದರ್ಥ.

೪. ಸ್ಪರ್ಶ ಮತ್ತು ಇಚ್ಛಾಮಾತ್ರದಿಂದಲೇ ಇವರು ಜ್ಞಾನ ವನ್ನು ನೀಡಬಲ್ಲರು. ಅವರು **'ಕಪಾಲಮೋಚನರು'** ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ತಮ್ಮಲ್ಲಿ ಶರಣಾದವರ ಕರ್ಮಫಲವನ್ನೂ ತಾವು ಸ್ವೀಕರಿಸಿ ಅವರನ್ನು ಉದ್ಧಾರ ಮಾಡಬಲ್ಲರು.

"ಧರ್ಮಗ್ಲಾನಿ ಉಂಟಾದಾಗ ಅಧರ್ಮವನ್ನು ನಾಶಮಾಡಲು ನಾನು ಅವತರಿಸುತ್ತೇನೆ" ಎಂದು ಶ್ರೀಕೃಷ್ಣನು ಹೇಳುತ್ತಾನೆ (೪:೭). ಸತ್ಯದಿಂದ ದೂರವಾಗುವುದೇ ಧರ್ಮಗ್ಲಾನಿ. ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಸತ್ಯವಿರುತ್ತದೆ. ಏಸುಕ್ರಿಸ್ತನು ಹೇಳು ವಂತೆ, ಉಪ್ಪು ತನ್ನ ವಿಶಿಷ್ಟ ರುಚಿಯನ್ನು ಕಳೆದುಕೊಂಡರೆ ಅದನ್ನು ಮತ್ತೆ ಉಪ್ಪಾಗಿಸುವುದು ಹೇಗೆ? ಹಾಗಾದಾಗ ಉಪ್ಪಾಗಿ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಪೆಟ್ರೋಲ್ ತನ್ನ ಕೆಲಸ ಮಾಡದಿದ್ದರೆ ವಾಹನವನ್ನು ನಡೆಸುವುದು ಹೇಗೆ? ಕುರ್ಚಿಯ ಮೇಲೆ ಕುಳಿತಾಗ ಅದು ಮುರಿದುಬಿದ್ದರೆ ಅದು ಕುರ್ಚಿಯೇ ಅಲ್ಲ. ಹಾಗೆಯೇ ಮನುಷ್ಯನು ತನ್ನತನವನ್ನು, ಅಂದರೆ ಮನುಷ್ಯತ್ವವನ್ನು ಕಳೆದುಕೊಂಡರೆ ಅವನು ನಂಬಿಕೆಗೆ ಅನರ್ಹನಾಗುತ್ತಾನೆ. ಆಗ ಸಮಾಜ ನಡೆಯುವುದೇ ಕಷ್ಟ ವಾಗುತ್ತದೆ. ಇದನ್ನೇ ಧರ್ಮಗ್ಲಾನಿ ಎಂದು ಕರೆಯುವುದು – ಮನುಷ್ಯ ತನ್ನ ಧರ್ಮದಿಂದ ದೂರವಾಗುವುದು; ಅವನು ಧರ್ಮಾಚರಣೆ ಮಾಡದೆ ಇರುವುದು ಧರ್ಮಗ್ಲಾನಿಯಲ್ಲ. ರಾವಣನ ರಾಜ್ಯವಾದ ಲಂಕೆಯಲ್ಲಿ ಎಲ್ಲರೂ ಯಾಗಯಜ್ಞಾದಿ ಧರ್ಮಾಚರಣೆ ಮಾಡುತ್ತಿದ್ದರು, ಪೂಜೆ ಪುನಸ್ಕಾರಾದಿಗಳನ್ನು ಮಾಡುತ್ತಿದ್ದರು, ದೇವಾಲಯಗಳಿಗೆ ಹೋಗುತ್ತಿದ್ದರು. ಆದರೆ ಅವರು ಮನುಷ್ಯತ್ವವನ್ನು ಕಳೆದುಕೊಂಡ ರಾಕ್ಷಸರಾಗಿದ್ದರು. ವ್ಯಕ್ತಿಯೊಬ್ಬ ತನ್ನ ಸತ್ಯದ ನೆಲೆಯಿಂದ ದೂರವಾಗುವುದೇ ಧರ್ಮಗ್ಲಾನಿ. ಇನ್ನೊಂದು ಅರ್ಥದಲ್ಲಿ ಧರ್ಮಗ್ಲಾನಿ ಎಂದರೆ ನೈತಿಕ ಅಧೋಗತಿ. ಇದರಿಂದ ವ್ಯಕ್ತಿ ಹಾಗೂ ಸಮಾಜ – ಎರಡೂ ದುರ್ಬಲವಾಗುತ್ತವೆ. ಸಮಾಜದಲ್ಲಿ ಮತ್ತು ಕುಟುಂಬ ದಲ್ಲಿ ಪರಸ್ಪರ ಮಾನವೀಯ ಸಂಬಂಧವಿಲ್ಲದಿರುವುದೂ ಧರ್ಮ ಗ್ಲಾನಿಯೇ. ಇನ್ನೊಂದು ಬಗೆಯ ಧರ್ಮಗ್ಲಾನಿಯೆಂದರೆ ರಾಜಕೀಯ ಅವನತಿ.

"ಸಾಧುಗಳನ್ನು ರಕ್ಷಿಸುವುದಕ್ಕೆ ಮತ್ತು ದುಷ್ಟರನ್ನು ಶಿಕ್ಷಿಸು ವುದಕ್ಕೆ ನಾನು ಅವತರಿಸುತ್ತೇನೆ" ಎಂದು ಶ್ರೀಕೃಷ್ಣನು ಹೇಳುತ್ತಾನೆ (೪.೮). ಅವತಾರಪುರುಷರು ಸಾಧುಗಳನ್ನು ಕಷ್ಟಗಳಿಂದ ಪಾರುಮಾಡುವುದಿಲ್ಲ. ಕಷ್ಟ ಮತ್ತು ಸುಖಗಳು ಜೀವನದ ಅವಿಭಾಜ್ಯ ಅಂಗಗಳು, ಮತ್ತು ಅವು ಹಲವಾರು ಕಾರಣಗಳನ್ನು ಅವಲಂಬಿಸಿರುತ್ತವೆ. ಅವತಾರಪುರುಷರು ಸಾಧುಗಳಲ್ಲಿರುವ ದುಷ್ಟಶಕ್ತಿಗಳನ್ನು ನಾಶಮಾಡಿ ಅವರು ಸಾಧನೆಯಲ್ಲಿ ಮುಂದುವರೆಯಲು ಸಹಾಯಮಾಡುತ್ತಾರೆ. ರಾಕ್ಷಸರು ಯಾಗಯಜ್ಞಗಳನ್ನು ಮಾಡಲು ಅಡಚಣೆಯನ್ನು ಉಂಟುಮಾಡುತ್ತಿದ್ದರು; ಭಗವಂತನು ಅವತರಿಸಿ ಬಂದು ಅವರನ್ನೆಲ್ಲ ಸಂಹರಿಸುತ್ತಿದ್ದನು ಎಂದೆಲ್ಲ ಪುರಾಣಗಳಲ್ಲಿ ಓದು ತ್ತೇವೆ. ಇಲ್ಲಿ ರಾಕ್ಷಸರೆಂದರೆ ಸಾಧನೆಗೆ ಅಡ್ಡಿಯಾಗಿರುವ ಆಂತರಿಕ